## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಪೂರ್ವ) ವಲಯ

### ಶಿವಾಜಿನಗರ ವಿಭಾಗ, ವಸಂತನಗರ ಉಪವಿಭಾಗ

ಮಾನ್ಯ ಆಯುಕ್ತರು ಬಿಬಿಎಂಪಿ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/2020-21 ದಿನಾಂಕ:21-09-2020 ರ ಆದೇಶದಂತೆ ದಿನಾಂಕ:07-05-2022 ರಂದು ವಾರ್ಡ್ ಸಂಖ್ಯೆ:110 ಸಂಪಂಗಿರಾಮನಗರ, ಹಳೆ ಪಲ್ಲವಿ ಟಾಕೀಸ್ ಪಕ್ಕ, ರಾಜಾರಾಮ್ ಮೋಹನ್‌ರಾಯ್ ರಸ್ತೆ ಬೆಂಗಳೂರು ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು.

**ಸಭೆಗೆ ಹಾಜರಾದವರು.**

| ಕ್ರಮ ಸಂಖ್ಯೆ: | ಹೆಸರು | ಸಮಿತಿ ಸಭೆಯ | ಮೊಬೈಲ್ ಸಂಖ್ಯೆ |
|---|---|---|---|
| 1 | ಶ್ರೀ. ರಮೇಶ್ | ನೋಡಲ್ ಅಧಿಕಾರಿಗಳು | |
| 2 | ಶ್ರೀ. ಚಿಕ್ಕಗೂಳಿಗೌಡ ಜೆ.ಜಿ | ಸಹಾಯಕ ಅಭಿಯಂತರರು | |
| 3 | ಶ್ರೀ. ಲಕ್ಷ್ಮೀನಾರಾಯಣ | ಕೆಲಸ ಪರಿವೀಕ್ಷಕರು | |
| 4 | ಶ್ರೀ.ವೆಂಕಟಚಲಪತಿ | ಹಿರಿಯ ಆರೋಗ್ಯ ನಿರೀಕ್ಷಕರು (ಬಿಬಿಎಂ.ಪಿ) | |
| 5 | ಶ್ರೀ. ಶ್ರೀನಿವಾಸ್ ವಿ. | ಕಿರಿಯ ಆರೋಗ್ಯ ನಿರೀಕ್ಷಕರು (ಬಿಬಿಎಂಪಿ) | |
| 6 | ಶ್ರೀ.ಎಸ್. ನಾಗೇಂದ್ರ ಬಾಬು | ಕಿರಿಯ ಅಭಿಯಂತರರು (ಬೆಸ್ಕಾಂ) | |
| 7 | ಶ್ರೀ.ಚನ್ನಪ್ಪಾಜಿ | ಸಹಾಯಕ ಕಾರ್ಯಪಾಲಕ ಅಭಿಯಂತರರು (BWSSB) | |
| 8 | ಶ್ರೀ. ಬಾಲಕೃಷ್ಣ ಆರ್ | ಕಂದಾಯ ಪರಿವೀಕ್ಷಕರು | |
| 9 | ಶ್ರೀ. ಧನರಾಜ್ | ಸಾರ್ವಜನಿಕರು | |
| 10 | ಶ್ರೀ.ಗೋಪಿ | ಸದಸ್ಯರು | |
| 11 | ಶ್ರೀ.ಲಕ್ಷ್ಮಿನಾರಾಯಣ | ಸಾರ್ವಜನಿಕರು | |

**ಸಭೆಯಲ್ಲಿ ಚರ್ಚಿಸಿರುವ ವಿಷಯಗಳು**

1) 1ನೇ ಮುಖ್ಯರಸ್ತೆಯಲ್ಲಿ ನೀರಿನ ಸೋರಿಕೆಯಾಗುತ್ತಿದ್ದು ಸರಿಪಡಿಸುವಂತೆ ಸೂಚಿಸಲಾಯಿತು.
ಕ್ರಮ: ಸಭೆಯಲ್ಲಿ ಭಾಗವಹಿಸಿದ್ದ ಬೆಂಗಳೂರು ಜಲಮಂಡಳಿ ಅಧಿಕಾರಿಯವರು ನೀರಿನ ಸೋರಿಕೆಯನ್ನು ಸರಿಪಡಿಸಲಾಗಿದೆ ಎಂದು ಸಭೆಯಲ್ಲಿ ತಿಳಿಸಿದರು.

2) ವಾರ್ಡ್ ನಂ.110 ರ ಸಂಪಂಗಿರಾಮನಗರದ 4ನೇ ಕ್ರಾಸ್‌ನಿಂದ 16ನೇ ಕ್ರಾಸ್‌ನವರಿಗೆ ಚರಂಡಿಯ ನೀರು ಸರಗವಾಗಿ ಹರಿಯುತ್ತಿಲ್ಲವೆಂದು ತಿಳಿಸಿದರು.
ಕ್ರಮ: ಸಹಾಯಕ ಅಭಿಯಂತರರು ಕಾಮಗಾರಿಯನ್ನು POW ಅನುದಾನದಲ್ಲಿ ನಿರ್ವಹಿಸಲು ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು.

3) ವಾರ್ಡ್ ಸಂಖ್ಯೆ:110 ರ ಆಲಿಆಸ್ಕರ್ ರಸ್ತೆಯನ್ನು ಸ್ವಚ್ಛತೆ ಕಾಪಾಡುವಂತೆ ಸೂಚಿಸಿದರು.
ಕ್ರಮ: ಕಿರಿಯ ಆರೋಗ್ಯ ಪರಿವೀಕ್ಷರು ಸ್ವಚ್ಛತೆಯನ್ನು ಮಾಡಲಾಗುತ್ತಿದೆ ಎಂದು ಸಭೆಯಲ್ಲಿ ತಿಳಿಸಿದರು.

4) ವಾರ್ಡ್ ಸಂಖ್ಯೆ:110 ರ ಕಬ್ಬನ್ ರಸ್ತೆಯಲ್ಲಿ ವಾಹನಗಳನ್ನು ನಿಲ್ಲಿಸುತ್ತಿದ್ದು ಕ್ರಮಕೈಗೊಳ್ಳುವಂತೆ ಸೂಚಿಸಲಾಯಿತು.

ಕ್ರಮ: ಈಗಾಗಲೇ ಪೋಲೀಸ್‌ರವರಿಗೆ ಪತ್ರ ಬರೆಯಲಾಗಿರುತ್ತದೆ ಹಾಗೂ ಮತ್ತೊಮ್ಮೆ ಕ್ರಮಕೈಗೊಳ್ಳುವಂತೆ ಪೋಲೀಸ್‌ರವರಿಗೆ ತಿಳಿಸಲಾಗುವುದೆಂದು ಸಭೆಯಲ್ಲಿ ತಿಳಿಸಲಾಯಿತು.

5) ವಾರ್ಡ್ ಸಂಖ್ಯೆ:110 ರ ಬನ್ನಪ್ಪ ಪಾರ್ಕ್‌ಗೆ ನೀರಿನ ಸಂಪರ್ಕ ಕಲ್ಪಿಸುವಂತೆ ಸೂಚಿಸಲಾಯಿತು.

ಕ್ರಮ: ತೋಟಗಾರಿಗೆ ಇಲಾಖೆ ರವರಿಗೆ ಕ್ರಮಕೈಗೊಳ್ಳುವಂತೆ ಸೂಚಿಸಲಾಗುವುದೆಂದು ಸಭೆಯಲ್ಲಿ ತಿಳಿಸಲಾಯಿತು. ತೋಟಗಾರಿಕೆ ಅಧೀಕ್ಷಕರು ಪರಿಶೀಲಿಸಿ ಕ್ರಮವಹಿಸಲಾಗುವುದೆಂದು ತಿಳಿಸಿದರು.

6) ವಾರ್ಡ್ ಸಂಖ್ಯೆ:110 ರ ಬನ್ನಪ್ಪ ಪಾರ್ಕ್‌ನ ಕಾವಲುಗಾರರು ಯಾರು ಇಲ್ಲ ಮತ್ತು ಸ್ವಚ್ಚತೆಯನ್ನು ಕಾಪಾಡುವವರು ಯಾರು ಇಲ್ಲ ಎಂದು ತಿಳಿಸಲಾಯಿತು..

ಕ್ರಮ: ತೋಟಗಾರಿಗೆ ಇಲಾಖೆ ರವರಿಗೆ ಕ್ರಮಕೈಗೊಳ್ಳುವಂತೆ ಸೂಚಿಸಲಾಗುವುದೆಂದು ಸಭೆಯಲ್ಲಿ ತಿಳಿಸಲಾಯಿತು. ತೋಟಗಾರಿಕೆ ಅಧೀಕ್ಷಕರು ಪರಿಶೀಲಿಸಿ ಕ್ರಮವಹಿಸಲಾಗುವುದೆಂದು ತಿಳಿಸಿದರು.

7) ವಾರ್ಡ್ ಸಂಖ್ಯೆ:110 ರ ಕಬ್ಬನ್‌ಪೇಟೆಯಲ್ಲಿ ಕಸದ ಪಾಯಿಂಟ್‌ಗಳು ಜಾಸ್ತಿಯಾಗಿವೆ ಎಂದು ತಿಳಿಸಿದರು.

ಕ್ರಮ: ಕಿರಿಯ ಆರೋಗ್ಯ ನಿರೀಕ್ಷಕರಿಗೆ ಇದರ ಬಗ್ಗೆ ಕ್ರಮಕೈಗೊಳ್ಳುವ ಸೂಚಿಸಲಾಯಿತು..

8) ವಾರ್ಡ್ ಸಂಖ್ಯೆ:110 ಸೊಳ್ಳೆಗಳಿಗೆ ಪಾಗಿಂಗ್ ನಡೆಸುತ್ತಿಲ್ಲವೆಂದು ತಿಳಿಸಿದರು.

ಕ್ರಮ: ಹಿರಿಯ ಆರೋಗ್ಯ ನಿರೀಕ್ಷಕರು ರವರಿಗೆ ಊರಹಬ್ಬವಿರುವುದರಿಂದ ಕ್ರಮಕೈಗೊಳ್ಳುವಂತೆ ಸೂಚಿಸಲಾಯಿತು.

9) ಅಧ್ಯಕ್ಷರು ಸಮಿತಿಯಲ್ಲಿ ಎಲ್ಲಾ ಸದಸ್ಯರಿಗೂ ಮೇಲ್ಕಂಡ ವಿಷಯಗಳನ್ನು ತಿಳಿಸುತ್ತಾ, ನಿರ್ಣಯಿಸಲು ಕೋರಿದರು. ಸಮಿತಿಯ ಸದಸ್ಯರು ಒಪ್ಪಿಗೆ ನೀಡುತ್ತಾ, ನಿರ್ಣಯಗಳನ್ನು ಅಂಗೀಕರಿಸಿ ಮೇಲಾಧಿಕಾರಿಗಳಿಗೆ ಕ್ರಮವಹಿಸಲು ತಿಳಿಸಿದರು.

10) ಸಮಿತಿಯ ಕಾರ್ಯದರ್ಶಿಯವರು ಸಭೆಗೆ ಹಾಜರಾದ ಎಲ್ಲರಿಗೂ ವಂದನೆಗಳನ್ನು ತಿಳಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| ಸದಸ್ಯ ಕಾರ್ಯದರ್ಶಿಗಳು | ಮಾನ್ಯ ನೋಡಲ್ ಅಧಿಕಾರಿಗಳು |
| ವಾರ್ಡ್–110 ಸಂಪಂಗಿರಾಮನಗರ | ವಾರ್ಡ್–110, ಸಂಪಂಗಿರಾಮನಗರ |
| ಬಿ.ಬಿ.ಎಂ.ಪಿ | ಬಿ.ಬಿ.ಎಂ.ಪಿ |

ಪ್ರತಿಗಳನ್ನು:

1) ಮಾನ್ಯ ಆಡಳಿತಗಾರರ ಆಪ್ತ ಕಾರ್ಯದರ್ಶಿ ರವರ ಅವಗಾಹನೆಗೆ ಕಳುಹಿಸಲಾಗಿದೆ.
2) ಮಾನ್ಯ ಮುಖ್ಯ ಆಯುಕ್ತರು ರವರ ಆಪ್ತ ಕಾರ್ಯದರ್ಶಿ ರವರ ಅವಗಾಹನೆಗೆ ಕಳುಹಿಸಲಾಗಿದೆ.
3) ಮಾನ್ಯ ವಿಶೇಷ ಆಯುಕ್ತರು (ಆಡಳಿತ) ರವರ ಆಪ್ತ ಕಾರ್ಯದರ್ಶಿ ರವರ ಅವಗಾಹನೆಗೆ ಕಳುಹಿಸಲಾಗಿದೆ
4) ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗೆ ಕಳುಹಿಸಲಾಗಿದೆ
5) ಮುಖ್ಯ ಅಭಿಯಂತರರು (ಪೂರ್ವ) ರವರ ಅವಗಾಹನೆಗೆ ಕಳುಹಿಸಲಾಗಿದೆ
6) ಕಾರ್ಯಪಾಲಕ ಅಭಿಯಂತರರು (ಶಿವಾಜಿನಗರ) ರವರ ಅವಗಾಹನೆಗೆ ಕಳುಹಿಸಲಾಗಿದೆ
7) ಕಛೇರಿ ಕಡತಕ್ಕೆ.